ಪಿ.ಡಬ್ಲು **-1**

ದಿ: **14-10-2024** ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ವಾಟೀಸವಾಲು: ಶ್ರೀ ವಿ ಎಮ್ ಎಮ್ ವಕೀಲರಿಂದ: -**

1. ಈ ದಾವೆಯನ್ನು ರಂಗಮ್ಮ, ಹನುಮಯ್ಯ ಇವರ ಮೇಲೆ ಮಾಡಿರುತ್ತೇನೆ. ಹನುಮಯ್ಯನ ತಂದೆ ಹೆಸರು ವೆಂಕಟಪ್ಪ. ಈ ದಾವೆಯನ್ನು ಭಾಗದ ಸಲುವಾಗಿ ಸಲ್ಲಿಸಿದ್ದೇನೆ. ಈ ದಾವೆಯನ್ನು ಎರಡು ಹೊಲಗಳ ಮೇಲೆ ಸಲ್ಲಿಸಿದ್ದೇನೆ ಅದರ ವಿಸ್ತೀರ್ಣ 20 ಗುಂಟೆ ಮತ್ತು 14 ಗುಂಟೆ ಇರುತ್ತದೆ. ನನ್ನ ಗಂಡನ ಹೆಸರು ಕರೆಪ್ಪ. ನನ್ನ ಗಂಡ ಸುಮಾರು 18 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನಗೆ 3 ಜನ ಗಂಡು ಮಕ್ಕಳಿದ್ದಾರೆ. ಅವರ ಹೆಸರು, ಯಲ್ಲಪ್ಪ, ಶಿವಪ್ಪ, ಹನುಮಂತ್ರಾಯ ಅಂತಾ ಇರುತ್ತಾರೆ. ಅವರು ವಯಸ್ಕರಾಗಿದ್ದಾರೆ ಮತ್ತು ಇಬ್ಬರಿಗೆ ಲಗ್ನ ಆಗಿರುತ್ತದೆ. ಅವರು ದುಡಿಯಲು ಬೇರೆ ಕಡೆ ಹೋಗಿದ್ದಾರೆ. ಅವರನ್ನು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಯಾವ ಕಾರಣಕ್ಕಾಗಿ ಅವರನ್ನು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಬೇರೆ ಕಡೆ ಹೋಗಿದ್ದಾರೆ ಎನ್ನುತ್ತಾರೆ. ನನ್ನ ಗಂಡನ ತಂದೆಯ ಹೆಸರು ಶಿವರಾಯ. ಶಿವರಾಯನ ತಂದೆಯ ಹೆಸರು ನಾಗಪ್ಪ. ನಾಗಪ್ಪನಿಗೆ ಇಬ್ಬರು ಮಕ್ಕಳು ಮಾನಶೆಯ್ಯ ಮತ್ತು ಶಿವರಾಯ ಅಂತಾ ಇದ್ದು ಮಾನಶೆಯ್ಯ ತೀರಿಕೊಂಡಿರುತ್ತಾರೆ. ನಾಗಪ್ಪನಿಗೆ ವೆಂಕಟಗಿರಿ ಎಂಬ ಸಹೋದರನಿದ್ದಾನೆ. ವೆಂಕಟಗಿರಿ 1ನೇ ಪ್ರತಿವಾದಿಯ ತಂದೆಯಾಗಿರುತ್ತಾನೆ. ನಾಗಪ್ಪ ಮತ್ತು ವೆಂಕಟಗಿರಿ ಇವರಿಗೆ ಹನುಮಯ್ಯ ಎನ್ನುವ ಸಹೋದರನಿದ್ದಾನೆ ಎಂದರೆ ಇರಬಹುದು ಎನ್ನುತ್ತಾರೆ. ನಾಗಪ್ಪ, ವೆಂಕಟಗಿರಿ ಮತ್ತು ಹನುಮಯ್ಯ ಇವರ ತಂದೆಯ ಹೆಸರು ಹನುಮಯ್ಯ ಎಂದರೆ ಸರಿ. ಹನುಮಯ್ಯ ತಂದೆ ಹನುಮಯ್ಯನಿಗೆ ರಾಮಸ್ವಾಮಿ, ಯಂಕಯ್ಯ ಮತ್ತು ರಂಗಯ್ಯ ಎಂದು ಮಕ್ಕಳಿದ್ದರು ಎಂದರೆ ಸರಿ. ಅವರು 3 ಜನ ಈಗ ಮರಣ ಹೊಂದಿರುತ್ತಾರೆ ಎಂದರೆ

ಸರಿ. ರಾಮಸ್ವಾಮಿ ಇವರಿಗೆ ಸ್ವಾಮಮ್ಮ, ಹನುಮಂತಿ ಮತ್ತು ಶಿವಮ್ಮ ಎನ್ನುವವ 3 ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಯಂಕಯ್ಯ ತಂದೆ ಹನುಮಯ್ಯನಿಗೆ ಗೋವಿಂದಪ್ಪ, ಮಾನಶೆಪ್ಪ ಮತ್ತು ಹನುಮಯ್ಯ ಎಂಬ 3 ಜನ ಮಕ್ಕಳಿದ್ದಾರೆಂದರೆ ಸರಿ. ಗೋವಿಂದಪ್ಪ ಮತ್ತು ಮಾನಶೆಪ್ಪ ತೀರಿಕೊಂಡಿದ್ದಾರೆ ಹನುಮಯ್ಯ ಜೀವಂತವಾಗಿದ್ದಾರೆಂದರೆ ಸರಿ. ಗೋವಿಂದಪ್ಪನಿಗೆ ರಂಗಮ್ಮ ಎನ್ನುವ ಮಗಳಿದ್ದಾಳೆಂದರೆ ಸರಿ. ಮಾನಶೆಪ್ಪನಿಗೆ ನಾಗಪ್ಪ, ಶಿವಪ್ಪ, ರಂಗಪ್ಪ ಎಂಬ ಮಕ್ಕಳಿದ್ದಾರೆ ಎಂದರೆ ಸರಿ. 2ನೇ ಪ್ರತಿವಾದಿ ಹನುಮಯ್ಯನ ಹೆಂಡತಿ ಎಂದರೆ ಸರಿ. ರಂಗಯ್ಯ ತಂದೆ ಹನುಮಯ್ಯನಿಗೆ ತಿರುಲಮಯ್ಯ ಮತ್ತು ಹನುಮಯ್ಯ ಇಬ್ಬರು ಮಕ್ಕಳಿದ್ದಾರೆಂದರೆ ಸರಿ. ತಿರುಲಯ್ಯನಿಗೆ ಹನುಮಯ್ಯ, ಎಂಬ ಮಗ ಮತ್ತು ಹನುಮಯ್ಯನಿಗೆ ಆಂಜನೇಯ ಎಂಬ ಮಗನಿದ್ದಾನೆಂದರೆ ಸರಿ. ಹನುಮಯ್ಯ ತಂದೆ ಹನುಮಯ್ಯನ ವಂಶಸ್ಥರನ್ನು ಈ ದಾವೆಯಲ್ಲಿ ನೀವು ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಅವರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರು ಬಂದಿರಲಿಲ್ಲ ಎನ್ನುತ್ತಾರೆ. ಹನುಮಯ್ಯ ತಂದೆ ಹನುಮಯ್ಯನ ವಂಶಸ್ಥರು ಈ ದಾವೆಗೆ ಪಕ್ಷಗಾರರಾಗಿದ್ದು ಅವರನ್ನು ಉದ್ದೇಶ ಪೂರ್ವಕಾವಾಗಿ ಸೇರಿಸಿಲ್ಲ ಎಂದರೆ ಸರಿ.

2. ನನ್ನ ಮಾವನ ತಂದೆಯ ತಂದೆ ಹನುಮಯ್ಯನಿಗೆ ಒಟ್ಟು 6-00 ಎಕರೆ ಜಮೀನು ಇತ್ತು. ನಿಮ್ಮ ಮಾವನ ತಂದೆ ನಾಗಪ್ಪ ಮತ್ತು ಅವರ ಸಹೋದರರು ಬೇರೆ ಬೇರೆಯಾಗಿದ್ದರು ಎಂದರೆ ಸರಿ. ನಮಗೆ 03-00 ಎಕರೆ ಮತ್ತು ವೆಂಕಟಗಿರಿ ಅವರಿಗೆ 03-00 ಎಕರೆ ಬಂದಿದೆ. ಸರ್ವೆ ನಂಬರ್ 5 ಒಟ್ಟು ಎಷ್ಟು ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬೇರೆ ಹೊಲಗಳನ್ನು ನನ್ನ ಮಾವ ಶಿವರಾಯ ಮತ್ತು ಮಾನಶೆಯ್ಯ ಅವರು ಮಾರಾಟ ಮಾಡಿರುತ್ತಾರೆ. ಎಷ್ಟು ಎಕರೆ ಮಾರಾಟ ಮಾಡಿದ್ದಾರೆ

ನನಗೆ ಗೊತ್ತಿಲ್ಲ. ನನ್ನ ಮದುವೆ ಆಗುವ ಪೂರ್ವದಲ್ಲಿಯೇ ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹನುಮಯ್ಯ ತಂದೆ ಹನುಮಯ್ಯನಿಗೆ ಯಾವ ಸರ್ವೆ ನಂಬರ್‌ನಲ್ಲಿ ಎಷ್ಟು ಭಾಗ ಬಂದಿದೆ ಎಂದರೆ ಸಅಕ್ಷಿಯು 3-00 ಎಕರೆ ಬಂದಿದೆ ಎನ್ನುತ್ತಾರೆ. ಸರ್ವೆ ನಂಬರ್ 5 ರಲ್ಲಿ ಅವರಿಗೆ ತಲಾ 3-00 ಎಕರೆ ಜಮೀನು ಬಂದಿರುತ್ತದೆ. 1ನೇ ಪ್ರತಿವಾದಿ ತಂದೆ ವೆಂಕಟಗಿರಿಗೆ ಸರ್ವೆ ನಂಬರ್ 5 ರಲ್ಲಿ 3-00 ಎಕರೆ ಜಮೀನು ಬಂದಿರುತ್ತದೆ. ಈ ವಿಷಯವನ್ನು ನಿಮ್ಮ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ಸಂಬಂಧಪಟ್ಟ ವಿಭಾಗ ಪತ್ರ ಮತ್ತು ಪಹಣಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

3. 1ನೇ ಪ್ರತಿವಾದಿಯ ತಂದೆ ವೆಂಕಟಗಿರಿ ನನ್ನ ಮದುವೆಯಾಗುವ ಪೂರ್ವದಲ್ಲಿಯೇ ತೀರಿಕೊಂಡಿರುತ್ತಾರೆ. ದಾವೆ ಮಾಡುವ ಕಾಲಕ್ಕೆ ಪಹಣಿ 1ನೇ ಪ್ರತಿವಾದಿಯ ಹೆಸರಿನಲ್ಲಿತ್ತು.ಮೊದಲು ಪಹಣಿ ಅವರ ತಂದೆಯ ಹೆಸರಿನಲ್ಲಿತ್ತು ನಂತರ 1ನೇ ಪ್ರತಿವಾದಿಯ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ. 1ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿ ಸುಮಾರು 40 ವರ್ಷ ಆಗಿದೆ. ಇದಕ್ಕೆ ಸಂಬಂಧಿಸಿದಂತೆ ಕಂದಅಯ ಇಲಾಖೆಯಲ್ಲಿ ತಕರಾರು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವೆಂಕಟಗಿರಿ ಜೀವಂತ ಇದ್ದಾಗ ದಾವಾ ಆಸ್ತಿಗಳು ಅವರ ಕಬ್ಜಾದಲ್ಲಿತ್ತು ಅವರ ಮರಣಾನಂತರ 1ನೇ ಪ್ರತಿವಾದಿ ಕಬ್ಜಾದಲ್ಲಿದ್ದಾರೆಂದರೆ ಸರಿ. 1ನೇ ಪ್ರತಿವಾದಿ ಕಬ್ಜಾದಲ್ಲಿದ್ದ ಹೊಲವನ್ನು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ವೆಂಕಟಗಿರಿ ಜೀವಂತ ಇದ್ದ ಕಾಲಕ್ಕೆ ದಾವಾ ಆಸ್ತಿಗಳು ಅವರ ಭಾಗಕ್ಕೆ ಹೋಗಿತ್ತು ಎಂದರೆ ಸರಿ. 1ನೇ ಪ್ರತಿವಾದಿಗೆ ತೊಂದರೆ ಇದ್ದ ಸಲುವಾಗಿ 2ನೇ ಪ್ರತಿವಾದಿಗೆ ಮಾರಾಟ

ಮಾಡಿದ್ದಾರೆ ಎಂದರೆ ಸಾಕ್ಷಿಯು ಭಾಗ ಕೊಡಬೇಕು ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ನಿಮಗೆ ಯಾವ ಭಾಗಾಂಶದ ಹಕ್ಕು ಇಲ್ಲ, ಭಾಗ ಬರಬೇಕಾಗಿಲ್ಲ ನೀವು ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕ ಮತ್ತು ಕಬ್ಜಾದಾರಳಾಗಿದ್ದರಿಮದ 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾಳೆ ಎಂದರೆ ಸಾಕ್ಷಿಯು ನನಗೆ ಭಾಗ ಬರಬೇಕು ಎನ್ನುತ್ತಾರೆ. ನಿಮ್ಮ ಮಾವ ಜೀವಂತ ಇದ್ದಾಗಲೇ ದಾವಾ ಆಸ್ತಿಯನ್ನು ವೆಂಕಟಗಿರಿ ಭಾಗಕ್ಕೆ ಕೊಟ್ಟಿದ್ದರಿಂದ ನಿಮಗೆ ಯಾವುದೇ ಭಾಗಾಂಶ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವಾಗಲೀ ನಿಮ್ಮ ಮಕ್ಕಳಾಗಲಿ ದಾವಾ ಆಸ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ